


'ಪುಷ್ಪಾ' ಮುಂದಿನ ಭಾಗಕ್ಕಾಗಿ ಕಾದಿರುವವರಲ್ಲಿ ಉತ್ತರದ ಮಂದಿಯ ಸಂಖ್ಯೆ ದೊಡ್ಡದಿದೆ

ಮಂಕಾಗಿರುವ ಹೊತ್ತಿನಲ್ಲಿ ಹೊಸ ಬೆಳಕಿಗಾಗಿ ಹುಡುಕಾಡುತ್ತಿರುವ ಶಾರುಖ್ ಖಾನ್ ಕೂಡ ತಮಿಳಿನ ಅಟ್ಲಿ ಅವರಂತಹ ನಿರ್ದೇಶಕರ ಸಿನಿಮಾಗೆ ಬಣ್ಣ ಹಚ್ಚಿರುವುದು ದಕ್ಷಿಣ ಭಾರತದ ಪ್ರತಿಭೆಗಳು ಹೇಗೆಲ್ಲ ಸಲ್ಲುತ್ತಿದ್ದಾರೆನ್ನುವುದಕ್ಕೆ ಉದಾಹರಣೆ. ಈ ಬದಲಾವಣೆ ತೀರಾ ಹೊಸತೇನೂ ಅಲ್ಲ. ಪ್ರಭುದೇವ ಅವರನ್ನು ಕರೆಸಿ, 'ವಾಂಟೆಡ್' ರೀಮೇಕ್ ಮೂಲಕ ಮಾರುಕಟ್ಟೆಯ ಲಯವನ್ನು ಸಲ್ಮಾನ್ ಖಾನ್ ಕಂಡುಕೊಂಡಿದ್ದನ್ನು ನೋಡಿದ್ದೇವೆ. 'ಸಿಂಗಂ' ಸರಣಿಯ ಆತ್ಮವನ್ನೆಲ್ಲ ಎತ್ತಿಕೊಂಡು ರೋಹಿತ್ ಶೆಟ್ಟಿ, ಅಜಯ್ ದೇವಗನ್ ಅವರ ಸಾಹಸಿ ವರ್ಚಸ್ಸನ್ನು ಮೇಲಕ್ಕೆತ್ತಿದ ಉದಾಹರಣೆ ಕೂಡ ಇದೆ. ಇದೇ ನಿರ್ದೇಶಕರು ತೆಲುಗಿನ 'ಟೆಂಪರ್' ಅನ್ನು ಹಿಂದಿಯಲ್ಲಿ 'ಸಿಂಬಾ' ಆಗಿಸಿ ಗೆದ್ದ ಮಾದರಿಯನ್ನೂ ನೋಡಬಹುದು.

ಕೋವಿಡ್ ಅಲೆ ಇಳಿದ ಕಾಲದಲ್ಲಿ ಬಂದ ಸಲ್ಮಾನ್ ಖಾನ್ ಸಿನಿಮಾ 'ರಾಧೆ' ಮಕಾಡೆಯಾಯಿತು. ಅದಕ್ಕೂ ಮೊದಲು ಬಂದಿದ್ದ 'ಭಾರತ್' ಕೂಡ ಜನಮನ ಗೆಲ್ಲಲಿಲ್ಲ. ಅಮೀರ್ ಖಾನ್ ಅವರಂತೂ ವರ್ಷಗಟ್ಟಲೆ ಒಂದೇ ಸಿನಿಮಾ ಮಾಡುವುದರಲ್ಲಿ ನಿರತರಾಗಿದ್ದಾರೆ. ಅಕ್ಷಯ್ ಕುಮಾರ್ ಬೆಳಗಿನ ಜಾವ ಏಳುವ ನಟ. ವರ್ಷಕ್ಕೆ ಮೂರ್ನಾಲ್ಕು ಸಿನಿಮಾಗಳನ್ನು ಮಾಡುವುದು ಪಕ್ಕಾ. ಆದರೂ ಅವರೀಗ ಫಾರ್ಮ್ ಕಳೆದುಕೊಂಡಿದ್ದಾರೆ. ರಣವೀರ್ ಸಿಂಗ್ ಇದ್ದುದರಲ್ಲೇ ತಾರಾ ವರ್ಚಸ್ಸು ಮೂಡಿಸಿಕೊಂಡವರು. ಅವರ ಅಭಿನಯದ '83' ಚಿತ್ರ ಒಟಿಟಿಯಲ್ಲಿ ಪ್ರಶಂಸೆ ಗಳಿಸಿತಾದರೂ ದೊಡ್ಡ ಸದ್ದು ಮಾಡಲಿಲ್ಲ.

ಆಲಿಯಾ ಭಟ್ ಇಮೇಜಿಗೆ ತಿರುವು ಕೊಡುವಂಥ ಸಿನಿಮಾ ಎಂದೇ ಬಿಂಬಿತವಾಗಿದ್ದ 'ಗಂಗೂಬಾಯಿ ಕಾಠಿಯಾವಾಡಿ' ಇದ್ದುದರಲ್ಲಿ ಪರವಾಗಿಲ್ಲ ಎನ್ನುವಂಥ ವಹಿವಾಟು ನಡೆಸಿದ ಹಿಂದಿ ಚಿತ್ರ. ಸಂಜಯ್ ಲೀಲಾ ಬನ್ಸಾಲಿ ರುಜುವಿನ ಈ ಚಿತ್ರಕ್ಕೆ ವಿಮರ್ಶಕರಿಂದ ಮೆಚ್ಚುಗೆ ವ್ಯಕ್ತವಾದರೂ ದಕ್ಷಿಣ ಭಾರತದ ಬ್ಲಾಕ್ ಬಸ್ಟರ್‌ಗಳ ಮಟ್ಟಕ್ಕೆ ಏರಲಿಲ್ಲ. ಅವರದ್ದೇ ನಿರ್ದೇಶನದ 'ಪದ್ಮಾವತ್' ತುಲನೆಯಲ್ಲಿ ಅದು ಮಾರುಕಟ್ಟೆಯಲ್ಲಿ ಸಪ್ಪೆಯೇ ಹೌದು. ದೀಪಿಕಾ ಪಡುಕೋಣೆ ಪ್ರಯೋಗಮುಖಿ ನಟಿ. ಅವರು ಬಂಡವಾಳವನ್ನೂ ಹಾಕಿರುವ 'ಗೆಹೆರಾಯಿಯಾಂ' ವಸ್ತುವಿಷಯದ ದೃಷ್ಟಿಯಿಂದ ತುಂಬಾ ಮುಖ್ಯವಾದ ಚಿತ್ರ. ಅದು ಒಟಿಟಿಯಲ್ಲಿ ತೆರೆಕಂಡು, ಮಿಶ್ರ ಪ್ರತಿಕ್ರಿಯೆ ಗಳಿಸಿತು. ಶಾಹಿದ್ ಕಪೂರ್ ಮುಳುಗುತ್ತಿದ್ದ ವೃತ್ತಿಬದುಕಿಗೆ ಹುಲುಕಡ್ಡಿಯ ಆಸರೆಯಾಗಿ ಒದಗಿಬಂದದ್ದು ತೆಲುಗಿನ 'ಅರ್ಜುನ್ ರೆಡ್ಡಿ'ಯ ರೀಮೇಕ್. 'ಕಬೀರ್ ಸಿಂಗ್' ಆಗಿ ಅದನ್ನು ನಿರ್ದೇಶಿಸಿದವರೂ ಮೂಲ ಚಿತ್ರಕ್ಕೆ ಆ್ಯಕ್ಷನ್–ಕಟ್ ಹೇಳಿದ್ದ ಸಂದೀಪ್ ರೆಡ್ಡಿ ವಂಗಾ. ಅದರ ಯಶಸ್ಸಿನಿಂದ ಇನ್ನೊಂದು ರೀಮೇಕ್ ಚಿತ್ರಕ್ಕೆ ಶಾಹಿದ್ ಒಡ್ಡಿಕೊಂಡರು. 'ಜೆರ್ಸಿ' ತೆಲುಗಿನಲ್ಲಿ ನಾನಿಗೆ ಕೊಟ್ಟ ಹೆಸರನ್ನು ಹಿಂದಿಯಲ್ಲಿ ಶಾಹಿದ್‌ಗೆ ಕೊಡಲಿಲ್ಲ. 'ಕೆಜಿಎಫ್2' ತೆರೆಕಂಡ ದಿನವೇ 'ಜೆರ್ಸಿ' ಕೂಡ ಬಿಡುಗಡೆಯಾಯಿತು. ಹಿಂದಿಯಲ್ಲಿ ವರ್ಷಗಟ್ಟಲೆ ಅನುಭವ ಇರುವ ನಟನ ಚಿತ್ರವನ್ನೂ ಮುಳುಗಿಸಿದ ಸಾಧನೆಯೋ ಕುಖ್ಯಾತಿಯೋ ಈ ಮೂಲಕ 'ಕೆಜಿಎಫ್2'ನದ್ದಾಯಿತೆನ್ನಿ. ಜಾಕಿ ಶ್ರಾಫ್ ಪುತ್ರ ಟೈಗರ್ ಶ್ರಾಫ್ ಕೂಡ ನೃತ್ಯ, ಸಾಹಸವನ್ನಷ್ಟೇ ನೆಚ್ಚಿಕೊಂಡು ಬಾಲಪ್ರೇಕ್ಷಕರ ಅಭಿಮಾನದ ಅಲೆ ಮೇಲೆ ಬದುಕುತ್ತಿದ್ದಾರೆ. ಇದುವರೆಗೆ ತೆರೆಕಾಣದಿರುವ ಅಪರೂಪದ ಮನುಷ್ಯ ಸಂಬಂಧಗಳ ಕಥನ ಇರುವ ಚಿತ್ರಗಳ ಕಥಾನಾಯಕನಾಗಿ ಆಯುಷ್ಮಾನ್ ಖುರಾನಾ ನಟಿಸುತ್ತಿದ್ದರೂ ಅವರನ್ನು 'ಸ್ಟಾರ್' ಎಂದು ಕರೆಯಲು ಹಿಂದಿ ಚಿತ್ರರಂಗದವರೇ ತಯಾರಿಲ್ಲ.

ಬಾಲಿವುಡ್ ಈಗ ಸ್ಟಾರ್‌ಗಳೇ ಇಲ್ಲದ ಸ್ಥಿತಿಯಲ್ಲಿದೆಯೇನೋ ಎನ್ನಿಸುವಂಥ ವಾತಾವರಣ ಇದೆ. ಖಾನ್‌ತ್ರಯರಿಗೆ ವಯಸ್ಸಾಗಿದೆ. ಅಕ್ಷಯ್ ಕುಮಾರ್ ವೈವಿಧ್ಯವೂ ಫಲ ನೀಡುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಈ ವರ್ಷ ಅತಿ ಹೆಚ್ಚು ಹಣ ಗಳಿಸಿದ ಹಿಂದಿ ಚಿತ್ರ 'ಕಾಶ್ಮೀರ್ ಫೈಲ್ಸ್'. ನಿರ್ದಿಷ್ಟ ರಾಜಕೀಯ ಸಮೂಹವೊಂದು ಸ್ವಪ್ರೇರಣೆಯಿಂದ ಪ್ರಚಾರ ನೀಡಿದ್ದರ ಪರಿಣಾಮವಿದು. ಕಾಶ್ಮೀರಿ




'ಕಾಶ್ಮೀರ್ ಫೈಲ್ಸ್' ಇತ್ತೀಚೆಗೆ ಅತಿಹೆಚ್ಚು ಗಳಿಕೆ ಮಾಡಿದ ಬಾಲಿವುಡ್ ಸಿನಿಮಾ